ಓ.ಎಸ್. ನಂಃ 248/2018
ಡಿ.ಡಬ್ಲ್ಯೂ-2 ( ಅಶೋಕ )

ದಿನಾಂಕ: 24-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ ಶ್ರೀ. ಪಿ ಎಮ್ ಹೆಚ್ ವಾದಿ ಪರ ವಕೀಲರಿಂದಃ**

1. ಪ್ರತಿವಾದಿ 1, 7, 8 ರಿಂದ 11 ಅಣ್ಣ ತಮ್ಮಂದಿರು ಎಂದರೆ ಸರಿ. ಪ್ರತಿವಾದಿ 12 ರಿಂದ 14 ನನ್ನ ಅಣ್ಣನಾದ ಸಿದ್ದಪ್ಪ ರಾಮಪ್ಪ ಕೊಪ್ಪದ ಇವರ ಮಕ್ಕಳು. ನನ್ನ ಅಣ್ಣಂದಿರಾದ ಸಿದ್ದಪ್ಪ, ಹನಮಂತ ಮತ್ತು ದುಂಡಪ್ಪ ಮೃತಪಟ್ಟಿರುತ್ತಾರೆ ಎಂದರೆ ಸರಿ. ವಾದಿಯರು ಮೃತ ಹನಮಂತ ಹಾಗೂ 2ನೇ ಪ್ರತಿವಾದಿ ಮಕ್ಕಳು ಎಂದರೆ ಸರಿ. ಪ್ರತಿವಾದಿ 3 ಮತ್ತು 4 ಪ್ರತಿವಾದಿ 1 ಮತ್ತು 2 ರವರ ಮಕ್ಕಳು ಎಂದರೆ ಸರಿ. 4 ನೇ ಪ್ರತಿವಾದಿ ಈಗ ಮೃತ ಪಟ್ಟಿರುತ್ತಾರೆ ಎಂದರೆ ಸರಿ. ಸದರಿಯವರಿಗೆ ಮದುವೆಯಾಗಿರುವುದಿಲ್ಲ ಎಂದರೆ ಸರಿ. 1ನೆ ಪ್ರತಿವಾದಿಗೆ ವಾದಿಯರು ಮತ್ತು ಪ್ರತಿವಾದಿ ನಂ. 2 ರಿಂದ 4 ವಾರಸುದಾರರು ಎಂದರೆ ಸರಿ.

2. ದಾವಾ ಆಸ್ತಿಗಳೆಲ್ಲವೂ ನಮ್ಮ ಹಿರಿಯರ ಆಸ್ತಿಗಳು ಎಂದರೆ ಸರಿ. ಸರ್ವೆ ನಂ. 61/1 ಉದ್ದಪ್ಪ ನಿಂಗಪ್ಪ ಸಾಂಗ್ವಿ ಇವರ ಜಮೀನು ಎಂದರೆ ಸರಿ. ಸರ್ವೆ ನಂ. 61/1 ರ 3 ಎಕರೆ 15 ಗುಂಟೆ ಜಮೀನನ್ನು ಮೃತ 1ನೇ ಪ್ರತಿವಾದಿಯ ತಂದೆ ದಿನಾಂಕ 23-04-1973 ರಂದು ಉದ್ದಪ್ಪ ನಿಂಗಪ್ಪ ಸಾಂಗ್ವಿ ರವರ ಕಡೆಯಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಅದೇ ರೀತಿ ಉಳಿದ 3 ಎಕರೆ 15 ಗುಂಟೆ ಜಮೀನನ್ನು ರಾಮಪ್ಪ ಲಕ್ಷ್ಮಪ್ಪ ಸಾಂಗ್ವಿ ಇವರು ದಿನಾಂಕ 23-01-1976 ರಂದು ಖರೀದಿ ಮಾಡಿರುತ್ತಾರೆ ಎಂದರೆ ಸರಿ.

3. ಪ್ರತಿವಾದಿ 8 ಮತ್ತು ಮೃತ ಸಿದ್ದಪ್ಪ ಇವರ ಮೇಲೆ ಮುಧೋಳ ನ್ಯಾಯಾಲಯದಲ್ಲಿ ಸಿಸಿ ನಂ. 457/1992 ರಲ್ಲಿ ಒಂದು ಪ್ರಕರಣ ದಾಖಲಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣ ರಾಮಪ್ಪ ಉದಪುಡಿ ಇವರ ಕೊಲೆಗೆ ಸಂಬಂಧ ಪಟ್ಟಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣ ವಿಜಯಪೂರದ ಜಿಲ್ಲಾ ನ್ಯಾಯಾಲಯಕ್ಕೆ ವರ್ಗವಣೆ ಗೊಂಡಿತ್ತು ಎಂದರೆ ನನಗೆ ಗೊತ್ತಿಲ್ಲ. ನಂತರ ಬಾಗಲಕೋಟ ಜಿಲ್ಲೆಯಾದ ಮೇಲೆ ಸದರಿ ಪ್ರಕರಣ ಬಾಗಲಕೋಟ ಜಿಲ್ಲಾ ನ್ಯಾಯಾಲಯಕ್ಕೆ ವರ್ಗಾವಣೆಯಗಿ ಎಸ್ ಸಿ ನಂ. 2/2001 ಎಂದು ದಾಖಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ದಿನಾಂಕ 29-08-2001 ರಂದು ಆರೊಪಿಗಳಿಗೆ 10 ವರ್ಷ ಶಿಕ್ಷೆ ಯಾಗಿದೆ ಎಂದರೆ ನನಗೆ ಗೊತ್ತಿಲ್ಲ.

4. ಮೃತ 1 ನೇ ಪ್ರತಿವಾದಿ ಎಸ್ ಸಿ ನಂ. 2/2001 ರಲ್ಲಿ ಆರೋಪಿಯಾಗಿದ್ದರಿಂದ ಪೋಲಿಸರು ಅವರನ್ನು ಆಪ್ರಕರಣಕ್ಕೆ ಸಂಬಂದಿಸಿದಂತೆ ಅವರನ್ನು ತುಂಬಾ ವಿಚಾರಣೆ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಈ ಕಾರಣಕ್ಕಾಗಿ ಮೃತ 1 ನೇ ಪ್ರತಿವಾದಿ ಮನೆಯಲ್ಲಿ ಇರುತ್ತಿದ್ದರು ನಾವೆಲ್ಲರೂ ತೋಟದಲ್ಲಿ ಇರುತ್ತಿದ್ದೇವು ಎಂದರೆ ಸರಿಯಲ್ಲ.

5. ಮೃತ 1 ನೇ ಪ್ರತಿವಾದಿ ಪಿ ಕೆ ಪಿ ಎಸ್ ನಲ್ಲಿ ಕಾರ್ಯದರ್ಶಿಯಾಗಿ ಸುಮಾರು 20 ವರ್ಷ ಕೆಲಸ ಮಾಡಿದ್ದಾರೆ ಎಂದರೆ ಸರಿ. ಸರ್ವೆ ನಂ. 61/2 4

ಎಕರೆ 21 ಗುಂಟೆ ಜಮೀನು ರಾಮಚಂದ್ರ ಯಮನಪ್ಪ ಸಾಯಣ್ಣವರ ಇವರ ಹೆಸರಿಲ್ಲಿತ್ತು ಎಂದರೆ ಸರಿ. ಸದರಿ ಜಮೀನನ್ನು 1 ನೇ ಪ್ರತಿವಾದಿ ದಿನಾಂಕ 17-02-1999 ರಂದು ರೂ 1,16,000/- ಕ್ಕೆ ರಾಮಚಂದ್ರ ಯಮನಪ್ಪ ಸಾಯಣ್ಣವರ ಇವರ ಕಡೆಯಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿ. ಸರ್ವೆ ನಂ. 61/2 ರಲ್ಲಿ ಬಾಕಿ ಉಳಿದ ಜಮೀನನ್ನು ಲಕ್ಷ್ಮಣ ಯಮನಪ್ಪ ವಾಳದ ಹಾಗೂ ಶ್ರೀಮತಿ ಬಾಳವ್ವ ಲಕ್ಷ್ಮಣ ವಾಳದ ಇವರಿಂದ ರೂ. 38,000/- ಕ್ಕೆ 1ನೇ ಪ್ರತಿವಾದಿ ಖರೀದಿ ಮಾಡಿರುತ್ತಾನೆ ಎಂದರೆ ಸರಿ. ಆ ಖರೀದಿ ಪತ್ರದ ಪ್ರಕಾರ ಖರೀದಿ ಮಾಡಿದ ಜಮೀನಿಗೆ 1 ನೇ ಪ್ರತಿವಾದಿಯ ಹೆಸರು ದಾಖಲಾಗಿರುತ್ತದೆ ಎಂದರೆ ಸರಿ. ಸದರಿ ಜಮೀನುಗಳು ಹಿರಿಯರ ಆಸ್ತಿಯಿಂದ ಬಂದ ಆದಾಯದಿಂದ ಖರೀದಿ ಮಾಡಿದ್ದು 1ನೇ ಪ್ರತಿವಾದಿಯ ಹೆಸರ ಹಚ್ಚಿಕೊಡಿದ್ದು ತಪ್ಪು ಇದೆ ಎಂದು ಹೇಳಿ ನಾವು ಇವತ್ತಿನ ವರೆಗೂ ನಾವು ಎಲ್ಲಿಯೂ ಪ್ರಶ್ನಿಸಿಲ್ಲಾ.

6. ನಂತರ ಡೈರಿ ನಂ. 2873 ರ ಪ್ರಕಾರ 2003 ರಲ್ಲಿ 1 ನೇ ಪ್ರತಿವಾದಿ ಖರೀದಿ ಮಾಡಿದ ಜಮೀಗೆ ಅವರ ಹೆಂಡತಿ ಮಕ್ಕಳಾದ 2 ರಿಂದ 4 ನೇ ಪ್ರತಿವಾದಿಯರ ಹೆಸರು ದಾಖಲಾಗಿರುತ್ತದೆ ಎಂದರೆ ಸರಿ. ಡೈರಿ ನಂ. 2873 ರನ್ನು ಪ್ರಶ್ನಿಸಿ ನಾವು ಯಾವುದೇ ಅಪೀಲು ಮಾಡಿಲ್ಲ. ಸರ್ವೆ ನಂ. 61/2 1ನೇ ಪ್ರತಿವಾದಿ ಸ್ವಂತ ಖರೀದಿ ಮಾಡಿದ್ದ ಜಮೀನಾಗಿದ್ದರಿಂದ ಸದರಿ ಜಮೀನಿನಲ್ಲಿ ಪ್ರತಿವಾದಿ 5 ರಿಂದ 14 ರವರಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

7. ನಮ್ಮ ಲಿಖಿತ ಹೇಳಿಕೆಯಲ್ಲಿ ದಾವಾ ಆಸ್ತಿಗೆ ಚೆಕ್ಕುಬಂದಿ ಬರೆಯಿಸಿಲ್ಲಾ ಎಂದು ಹೇಳಿದ್ದಿರಿ ಎಂದರೆ ನನಗೆ ಗೊತ್ತಿಲ್ಲ. ಅದೇ ರೀತಿ ವಾದಿಯರು ಹೇಳಿದ ವಂಶಾವಳಿ ತಪ್ಪು ಇದೆ ಎಂದು ನಮ್ಮ ಹೇಳಿಕೆಯಲ್ಲಿ ಬರೆಯಿಸಿದ್ದೇವೆ ಎಂದರೆ ಸರಿಯಲ್ಲ.

8. ಈ ದಾವೆಯ ದಾವಾ ಆಸ್ತಿಗಳು ಮತ್ತು ಸರ್ವೆ ನಂ. 61/2 ಕುರಿತು ಓಎಸ್ ನಂ. 177/2011 ರಲ್ಲಿ ಒಂದು ದಾವೆ ನಡೆದಿತ್ತು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು, ಮೃತ 1ನೇ ಪ್ರತಿವಾದಿ, ಮೃತ 7 ನೇ ಪ್ರತಿವಾದಿ, 9 ರಿಂದ 11 ಪಕ್ಷಗಾರರು ಇದ್ದೆವು ಎಂದರೆ ಸರಿ. ಸದರಿ ದಾವೆಯಲ್ಲಿಯೂ ಸಹ ಈ ದಾವೆಯಲ್ಲಿ ತೋರಿಸಿದ ವಂಶಾವಳಿಯನ್ನೇ ತೋರಿಸಿದ್ದೆವೆ ಎಂದರ ಸರಿ. ಸದರಿ ದಾವೆಯಲ್ಲಿ ನಾನು ನಮ್ಮ ವಕೀಲರಿಂದ ಹಾಜರಾಗಿದ್ದೇನೆ. ಸದರಿ ದಾವೆಯಲ್ಲಿಯೂ ಸಹ ತೋರಿಸಿದ ದಾವಾ ಆಸ್ತಿಗಳಿಗೆ ಚೆಕ್ಕುಬಂದಿ ಬರೆದಿಲ್ಲ ಹಾಗೂ ದಾವಾ ಆಸ್ತಿಗಳಿಗೆ ಚೆಕ್ಕುಬಂದಿ ಬರೆದಿಲ್ಲ ಎಂದು ನಾನು ನನ್ನ ಲಿಖಿತ ಹೇಳಿಕೆಯಲ್ಲಿ ಯಾವುದೇ ತಕರಾರು ಮಾಡಿಲ್ಲ ಎಂದರೆ ಸರಿ . ಈ ದಾವೆಯಲ್ಲಿ ದಾವಾ ಆಸ್ತಿಗಳಳಿಗೆ ಚೆಕ್ಕುಬಂದಿ ಬರೆದಿಲ್ಲ ಎಂದು ಯಾವ ಕಾರಣಕ್ಕಾಗಿ ತಕರಾರು ಮಾಡುತ್ತಿದ್ದೇನೆ ಎಂದು ಹೇಳಲು ಬರುವುದಿಲ್ಲ. ಈ ದಾವೆಯಲ್ಲಿ ಪ್ರತಿವಾದಿ 12 ರಿಂದ 14 ರವರನ್ನು ನಾನು ತಕರಾರು ಮಾಡಿದ ನಂತರ ಸೇರಿಸಿದ್ದಾರೆ ಎಂದರೆ ಸರಿ. ಓ ಎಸ್ ನಂ. 177/2011 ರಲ್ಲಿ ಏನೇನು ಬರೆಯಿಸಿ ಹಾಕಲಾಗಿದೆ ಎಂದು ನನಗೆ ಗೊತ್ತಿಲ್ಲ ಎಲ್ಲಾ ಮಾಹಿತಿಯನ್ನು ನನ್ನ ಅಣ್ಣ ಮೃತ

ಪ್ರತಿವಾದಿ ನಂ. 1 ಕೊಟ್ಟಿರುತ್ತಾರೆ. ಈ ದಾವೆಗೆ ನಾನು ಸಲ್ಲಿಸಿದ ನನ್ನ ಲಿಖಿತ ಹೇಳಿಕೆಯಲ್ಲಿ ಓ ಎಸ್ 177/2011 ರಲ್ಲಿ ನಾವು ಸಲ್ಲಿಸಿದ ಲಿಖಿತ ಹೇಳಿಕೆಗೆ ನನ್ನ ಅಣ್ಣ ಹನಮಂತ ಮಾಹಿತಿ ಕೊಟ್ಟಿದ್ದರು ಎಂದು ಬರೆಯಿಸಿಲ್ಲಾ.

9. ನಮ್ಮ ಹಿರಿಯರ ಆಸ್ತಿಗಳಿಂದ ಬಂದ ಉತ್ಪನ್ನದ ಬಗ್ಗೆ ಲೆಕ್ಕ ಪತ್ರ ಬರೆದು ಇಟ್ಟಿರುವುದಿಲ್ಲ. ದಾವಾ ಆಸ್ತಿಗಳಿಂದ ಪ್ರತ್ಯೇಕವಾಗಿ ಎಷ್ಟು ಎಷ್ಟು ಆದಾಯ ಬರುತ್ತದೆ ಎಂದು ಬರೆದು ಇಟ್ಟಿಲ್ಲಾ. ಸರ್ವೆ ನಂ. 61/2 ನ್ನು ಖರೀದಿ ಮಾಡಲು 1 ನೇ ಪ್ರತಿವಾದಿ ಗೆ ನಾನು ಮತ್ತು ಪ್ರತಿವಾದಿ 8, 9 ಮತ್ತು 11 ಎಷ್ಟು ದುಡ್ಡು ಕೊಟ್ಟಿದ್ದೇವೆ ಎಂದರೆ ಹೇಳಲು ಬರುವುದಿಲ್ಲ ಎಂದು ಹೇಳುತ್ತಾರೆ.

ಮುಂದುವರೆದ ಪಾಟೀಸವಾಲಿಗೆ ಸಮಯ ಕೋರುತ್ತಾರೆ. ಸಮಯ ಕೊಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)

ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ